# ರಾಷ್ಟ್ರೀಯ ವರಮಾನ
# (National Income Accounting)

2.1 ಪೀಠಿಕೆ

2.2 ರಾಷ್ಟ್ರೀಯ ವರಮಾನದ ಅರ್ಥ

2.3 ರಾಷ್ಟ್ರೀಯ ವರಮಾನದ ಪರಿಭಾವನೆಗಳು

2.4 ರಾಷ್ಟ್ರೀಯ ವರಮಾನದ ಅಳತೆ

2.5 ರಾಷ್ಟ್ರೀಯ ವರಮಾನದ ಅಳತೆಯಲ್ಲಿನ ಸಮಸ್ಯೆಗಳು

2.6 ರಾಷ್ಟ್ರೀಯ ವರಮಾನದ ಮಹತ್ವ

## 2.1 ಪೀಠಿಕೆ (Introduction)

ರಾಷ್ಟ್ರೀಯ ವರಮಾನವನ್ನು 'ರಾಷ್ಟ್ರೀಯ ಉತ್ಪನ್ನ' 'ರಾಷ್ಟ್ರೀಯ ಲಾಭಾಂಶ' 'ರಾಷ್ಟ್ರೀ ವೆಚ್ಚ' 'ಸಾಮಾಜಿಕ ಲೆಕ್ಕಾಚಾರ' ಎಂಬ ವಿವಿಧ ಹೆಸರುಗಳಿಂದ ಕರೆಯಲಾಗುತ್ ಅರ್ಥಶಾಸ್ತ್ರದಲ್ಲಿ ರಾಷ್ಟ್ರೀಯ ವರಮಾನದ ಪರಿಕಲ್ಪನೆಯು ಒಂದು ಬಹು ಮುಖ್ಯವಾದ ಪ ಪ್ರಾಯೋಗಿಕ ಮಹತ್ವವನ್ನು ಪಡೆದಿರುವ ಪರಿಕಲ್ಪನೆಯಾಗಿದೆ. ಒಂದು ರಾಷ್ಟ್ರದ ಅರ್ಥವ್ಯವ ಸಮಗ್ರ ಚಿತ್ರಣವನ್ನು ನೀಡುವುದರೊಂದಿಗೆ ಅರ್ಥವ್ಯವಸ್ಥೆಯ ಅಭಿವೃದ್ಧಿಯ ಮಟ್ಟ, ಅ ಬೆಳವಣಿಗೆ, ವಿವಿಧ ಆರ್ಥಿಕ ವಲಯಗಳ ಪಾತ್ರ, ಜನರು ಕೈಗೊಳ್ಳುತ್ತಿರುವ ಆರ್ಥಿ ಚಟುವಟಿಕೆಗಳ ಸ್ವರೂಪ, ವಿವಿಧ ಜನವರ್ಗಗಳ ನಡುವೆ ಆದಾಯದ ವಿತರಣೆ ವಿ ದೇಶಗಳ ನಡುವೆ ಆರ್ಥಿಕಾಭಿವೃದ್ಧಿಯ ಹೋಲಿಕೆ ಇತ್ಯಾದಿ ಅಂಶಗಳನ್ನು ರಾಷ್ಟ್ರೀಯ ವರಮ ಪರಿಕಲ್ಪನೆಯು ವಿವರಿಸುತ್ತದೆ. ಆದ್ದರಿಂದ ರಾಷ್ಟ್ರೀಯ ವರಮಾನವನ್ನು ಒಂದು ರಾಷ್ಟ್ ಅರ್ಥವ್ಯವಸ್ಥೆಯ 'ಆರೋಗ್ಯದ ಸೂಚ್ಯಾಂಕ' (Index of health of the econom ಎಂದೂ ಕರೆಯಲಾಗುತ್ತದೆ.

Scanned with CamScanner

ರಾಷ್ಟ್ರೀಯ ವರಮಾನದ ಪರಿಕಲ್ಪನೆಯು ಇಷ್ಟೊಂದು ಪ್ರಾಯೋಗಿಕ ಪ್ರಾಮುಖ್ಯತೆಯನ್ನು ಹೊಂದಿದ್ದರೂ 20ನೆಯ ಶತಮಾನದ ಪೂರ್ವಾರ್ಧದವರೆಗೆ ಆರ್ಥಿಕ ವಿಶ್ಲೇಷಣೆಯಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದಿರಲಿಲ್ಲ. ವಾಣಿಜ್ಯ ಪಂಥೀಯರು ಮತ್ತು ಪ್ರಕೃತಿ ಪಂಥೀಯ ಅರ್ಥಶಾಸ್ತ್ರಜ್ಞರು ಈ ಬಗ್ಗೆ ಅಲ್ಪ ಸ್ವಲ್ಪ ವಿವರಣೆಯನ್ನು ಕೊಟ್ಟಿದ್ದರು. ಆದರೆ ಜಾಗತಿಕ ಆರ್ಥಿಕ ಮುಗ್ಗಟ್ಟಿನ (1929-1932) ನಂತರ ರಾಷ್ಟ್ರೀಯ ವರಮಾನದ ವಿಶ್ಲೇಷಣೆಯು ಪ್ರಾಮುಖ್ಯತೆಯನ್ನು ಪಡೆದುಕೊಂಡು ಪ್ರೊ. ಜೆ. ಎಂ. ಕೇನ್ಸರ 'ಸಾಮಾನ್ಯ ಸಿದ್ಧಾಂತ' (1936) ಕೃತಿಯ ಪ್ರಕಟಣೆಯೊಂದಿಗೆ ಅರ್ಥಶಾಸ್ತ್ರದಲ್ಲಿ ಬಹುಮುಖ್ಯ ಪರಿಭಾವನೆಯಾಗಿ ಅರ್ಥಶಾಸ್ತ್ರಜ್ಞರ ಗಮನ ಸೆಳೆಯಿತು. ಇಂದು ವಿಶಾಲಾತ್ಮಕ ಆರ್ಥಿಕ ವಿಶ್ಲೇಷಣೆಯ ಅವಿಭಾಜ್ಯ ಅಂಗವಾಗಿರುವ ರಾಷ್ಟ್ರೀಯ ವರಮಾನದ ವಿಶ್ಲೇಷಣೆಯು ಅರ್ಥಶಾಸ್ತ್ರಜ್ಞರು ಮತ್ತು ಜನಸಾಮಾನ್ಯರಿಗೆ ಉಪಯುಕ್ತವಾದ ವಿಷಯವಾಗಿದೆ.

## 2.2 ರಾಷ್ಟ್ರೀಯ ವರಮಾನದ ಅರ್ಥ (Meaning of National Income)

ರಾಷ್ಟ್ರೀಯ ವರಮಾನ ಎಂದರೆ ಅದರ ಹೆಸರೆ ಸೂಚಿಸುವಂತೆ ರಾಷ್ಟ್ರವೊಂದರ ಆದಾಯದ ಮೊತ್ತವಾಗಿದೆ. ಅರ್ಥಶಾಸ್ತ್ರದಲ್ಲಿ ರಾಷ್ಟ್ರೀಯ ವರಮಾನವನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಒಂದೆಡೆ ರಾಷ್ಟ್ರೀಯ ವರಮಾನವನ್ನು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾದ ಎಲ್ಲಾ ಸರಕು - ಸೇವೆಗಳ ಒಟ್ಟು ಮೌಲ್ಯವೆಂದು ವ್ಯಾಖ್ಯಾನಿಸಿದರೆ, ಇನ್ನೊಂದೆಡೆ ಆರ್ಥಿಕ ಚಟುವಟಿಕೆಗಳ ಮೂಲಕ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಯಾಗುವ ವರಮಾನದ ಮೊತ್ತವನ್ನು ರಾಷ್ಟ್ರೀಯ ವರಮಾನವೆಂದು ಕರೆಯಲಾಗುತ್ತದೆ. ಅಲ್ಲದೆ ರಾಷ್ಟ್ರೀಯ ವರಮಾನವನ್ನು ಅರ್ಥವ್ಯವಸ್ಥೆಯಲ್ಲಿ ವಿವಿಧ ಉತ್ಪಾದನಾಂಗಗಳಿಗೆ ಕೂಲಿ. ಗೇಣಿ, ಬಡ್ಡಿ ಮತ್ತು ಲಾಭದ ರೂಪದಲ್ಲಿ ನೀಡಲ್ಪಡುವ ಪ್ರತಿಫಲದ ಒಟ್ಟು ಮೊತ್ತವೆಂದೂ ವ್ಯಾಖ್ಯಾನಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ವರಮಾನವೆಂದರೇನು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರವನ್ನು ಕಂಡುಕೊಳ್ಳಲು ಕೆಲವು ಪ್ರಮುಖ ಅರ್ಥಶಾಸ್ತ್ರಜ್ಞರು ಕೊಟ್ಟಿರುವ ವ್ಯಾಖ್ಯೆಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ.

ಆಲ್ಫ್ರೆಡ್ ಮಾರ್ಷಲ್‌ರ ಪ್ರಕಾರ "ಒಂದು ರಾಷ್ಟ್ರದ ಶ್ರಮಶಕ್ತಿ ಮತ್ತು ಬಂಡವಾಳ ಅಲ್ಲಿಯ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಸಕ್ರಿಯವಾಗಿ ವರ್ತಿಸಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸುವ ವಸ್ತು ಮತ್ತು ಸೇವೆಗಳ ನಿವ್ವಳ ಮೊತ್ತವೆ ರಾಷ್ಟ್ರೀಯ ವರಮಾನವಾಗಿದೆ."

ಪ್ರೊ ಎ.ಸಿ.ಪಿಗೂರವರ ಪ್ರಕಾರ "ವಿದೇಶಗಳಿಂದ ಬರುವ ಆದಾಯ ವನ್ನೊಳಗೊಂಡಂತೆ ಹಣ ರೂಪದಲ್ಲಿ ಅಳೆಯಬಹುದಾದ ಒಂದು ಸಮುದಾಯದ ಭೌತಿಕ ಆದಾಯದ ಒಂದು ಭಾಗವೆ ರಾಷ್ಟ್ರೀಯ ಆದಾಯವಾಗಿದೆ."

Scanned with CamScanner

8. ರಾಷ್ಟ್ರೀಯ ...

## 2.3 ರಾಷ್ಟ್ರೀಯ ವರಮಾನದ ಪರಿಭಾವನೆಗಳು (Concepts of National Income)

ರಾಷ್ಟ್ರೀಯ ವರಮಾನವು ಒಂದು ಸಂಕೀರ್ಣವಾದ ಪರಿಕಲ್ಪನೆಯಾಗಿದ್ದು ಅದರ ಸಮಗ್ರ ಚಿತ್ರಣ ಮತ್ತು ಸಮರ್ಪಕ ಲೆಕ್ಕಾಚಾರ ಮಾಡಲು ಅರ್ಥಶಾಸ್ತ್ರಜ್ಞರು ವಿವಿಧ ಪರಿಭಾವನೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ರಾಷ್ಟ್ರೀಯ ವರಮಾನದ ಅಧ್ಯಯನದ ಸಂದರ್ಭದಲ್ಲಿ ಬಳಸಲಾಗುವ ಪ್ರಮುಖ ಪರಿಭಾವನೆಗಳು ಈ ಕೆಳಗಿನಂತಿವೆ.

1. ಒಟ್ಟು ರಾಷ್ಟ್ರೀಯ ಉತ್ಪನ್ನ (G.N.P.)
2. ಒಟ್ಟು ದೇಶಿಯ ಉತ್ಪನ್ನ (G.D.P.)
3. ನಿವ್ವಳ ರಾಷ್ಟ್ರೀಯ ಉತ್ಪನ್ನ (N.N.P)
4. ರಾಷ್ಟ್ರೀಯ ವರಮಾನ (N.I)
5. ತಲಾ ವರಮಾನ (P.C.I)

### 1. ಒಟ್ಟು ರಾಷ್ಟ್ರೀಯ ಉತ್ಪನ್ನ (Gross National Product)

ಒಟ್ಟು ರಾಷ್ಟ್ರೀಯ ಉತ್ಪನ್ನವು ರಾಷ್ಟ್ರೀಯ ವರಮಾನದ ಅಳತೆಯ ಒಂದು ಸಮಗ್ರ ಮತ್ತು ಬಹುಮುಖ್ಯವಾದ ಪರಿಭಾವನೆಯಾಗಿದೆ. ಒಟ್ಟು ರಾಷ್ಟ್ರೀಯ ಉತ್ಪನ್ನವು ಒಂದು ದೇಶದ ಅರ್ಥವ್ಯವಸ್ಥೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾದ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಹಣರೂಪಿ ಮೌಲ್ಯವಾಗಿದೆ. ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಲೆಕ್ಕಾಚಾರ ಮಾಡುವಾಗ ಈ ಕೆಳಗಿನ ಅಂಶಗಳನ್ನು ಪರಿಗಣಿಸಲಾಗುತ್ತದೆ.

Scanned with CamScanner

1. ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಲೆಕ್ಕಾಚಾರ ಮಾಡುವಾಗ ಕೇವಲ ಅಂತಿಮ ವ... ಮತ್ತು ಸೇವೆಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ.
2. ಅಂತಿಮ ವಸ್ತುಗಳ ಮತ್ತು ಸೇವೆಗಳ ಮೌಲ್ಯವನ್ನು ಹಣರೂಪದಲ್ಲಿ ... ಅಳೆಯಲಾಗುತ್ತದೆ.
3. ಒಟ್ಟು ರಾಷ್ಟ್ರೀಯ ಉತ್ಪನ್ನದ ಲೆಕ್ಕಾಚಾರ ಮಾಡುವಾಗ ಕೇವಲ ಪ್ರಸಕ್ತ ವರ್ಷ... ಉತ್ಪಾದನೆಯಾದ ಸರಕು ಮತ್ತು ಸೇವೆಗಳನ್ನು ಮಾತ್ರ ಪರಿಗಣಿಸಲಾಗುತ್ತದೆ.
4. ಒಟ್ಟು ರಾಷ್ಟ್ರೀಯ ಉತ್ಪನ್ನದ ಲೆಕ್ಕಾಚಾರ ಮಾಡುವಾಗ ಸರಕು ಸೇವೆ... ಉತ್ಪಾದನೆಯಲ್ಲಾದ ಸವಕಳಿ ಮತ್ತು ದುರಸ್ತಿ ವೆಚ್ಚಗಳನ್ನು ಕಳೆಯುವುದಿಲ್ಲ.
5. ಒಟ್ಟು ರಾಷ್ಟ್ರೀಯ ಉತ್ಪನದಲ್ಲಿ ಸರಕಾರಗಳು ಸಾಮಾಜಿಕ ಭದ್ರತೆ ಯೋಜನೆ... ವ್ಯಕ್ತಿಗಳಿಗೆ ಕೊಡಮಾಡುವ ಆದಾಯವನ್ನು ಪರಿಗಣಿಸುವುದಿಲ್ಲ.
6. ಬೆಲೆಗಳ ಏರಿಳಿತಗಳಿಂದ ಉಂಟಾಗುವ ಲಾಭ ಮತ್ತು ಹಾನಿಗಳನ್ನು ಒಟ್ಟು ರಾಷ್ಟ್ರೀ... ಉತ್ಪನ್ನದ ಲೆಕ್ಕಾಚಾರದಲ್ಲಿ ಪರಿಗಣಿಸುವುದಿಲ್ಲ.
7. ಅದೇ ರೀತಿ ಅಕ್ರಮ ಅಥವಾ ಕಾನೂನು ಬಾಹಿರ ಚಟುವಟಿಕೆಗಳಿಂದ ವ್ಯಕ್ತಿಗಳು ಗಳಿಸ... ವರಮಾನವನ್ನೂ ಒಟ್ಟು ರಾಷ್ಟ್ರೀಯ ವರಮಾನದಲ್ಲಿ ಸೇರಿಸುವುದಿಲ್ಲ

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಒಟ್ಟು ರಾಷ್ಟ್ರೀಯ ಉತ್ಪನ್ನದ ಸೂತ್ರವ... ಸರಳವಾಗಿ ಈ ಕೆಳಗಿನಂತೆ ಬರೆಯಬಹುದು

ಒಟ್ಟು ರಾಷ್ಟ್ರೀಯ ಉತ್ಪನ್ನ = ನಿವ್ವಳ ರಾಷ್ಟ್ರೀಯ ಉತ್ಪನ್ನ + ಸವಕಳಿ ವೆಚ್ಚಗಳು

GNP = NNP + Depreciation

ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಎರಡು ರೀತಿಯಲ್ಲಿ ಪ್ರಸ್ತುತ ಪಡಿಸಲಾಗುತ್ತದೆ. ಅವುಗಳೆಂದರೆ

**a) ಮಾರುಕಟ್ಟೆ ಬೆಲೆಯಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ (GNP at Market Prices)**

ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನವೆಂದರೆ ರಾಷ್ಟ್ರೀಯ ವರಮಾನದ ಲೆಕ್ಕಾಚಾರದ ವರ್ಷದಲ್ಲಿ ಜಾರಿಯಲ್ಲಿರುವ ಬೆಲೆಗಳಲ್ಲಿ ರಾಷ್ಟ್ರೀಯ ಉತ್ಪನ್ನವನ್ನು ಲೆಕ್ಕಾಚಾರ ಮಾಡುವುದಾಗಿದೆ. ಅಂದರೆ ಆ ವರ್ಷದ ಅವಧಿಯಲ್ಲಿ ಅರ್ಥ ವ್ಯವಸ್ಥೆಯಲ್ಲಿ ಉತ್ಪಾದನೆಯಾದ ಒಟ್ಟು ಸರಕು ಸೇವೆಗಳ ಮೌಲ್ಯವನ್ನು ಅದೇ ವರ್ಷದ ಮಾರುಕಟ್ಟೆ ಬೆಲೆಗಳಲ್ಲಿ ಗುಣಿಸಿ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಕಂಡುಹಿಡಿಯಲಾಗುತ್ತದೆ. ಈ ವಿಧಾನದಲ್ಲಿ ದೇಶದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾದ ಎಲ್ಲಾ ವಸ್ತಗಳು ಮತ್ತು ಸೇವೆಗಳ ಮೌಲ್ಯದೊಂದಿಗೆ ವಿದೇಶದಿಂದ ಬಂದ ವರಮಾನವನ್ನು ಸೇರಿಸಿ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಕಂಡು ಹಿಡಿಯಲಾಗುತ್ತದೆ. ಆದ್ದರಿಂದ

Scanned with CamScanner

ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ = ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶಿಯ ಉತ್ಪನ್ನ + ವಿದೇಶದಿಂದ ಬಂದ ನಿವ್ವಳ ವರಮಾನ

GNP at Martet prices = GDP at Market prices + Net Income from abroad

**b) ಉತ್ಪಾದನಾಂಗಗಳ ವೆಚ್ಚದ ರೂಪದ ಒಟ್ಟು ರಾಷ್ಟ್ರೀಯ ಉತ್ಪನ್ನ (GNP at Factor Cost)**

ಉತ್ಪಾದನಾಂಗಗಳ ವೆಚ್ಚದ ರೂಪದಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನವೆಂದರೆ, ಒಂದು ವರ್ಷದ ಅವಧಿಯಲ್ಲಿ ವಿವಿಧ ಉತ್ಪಾದನಾಂಗಗಳು ತಾವು ಸಲ್ಲಿಸಿದ ಸೇವೆಗೆ ಪ್ರತಿಫಲವಾಗಿ ಪಡೆಯುವ ಆದಾಯದ ಒಟ್ಟು ಮೊತ್ತವಾಗಿದೆ. ಅಂದರೆ ಅರ್ಥವ್ಯವಸ್ಥೆಯಲ್ಲಿ ಭೂಮಿ, ಶ್ರಮ ಬಂಡವಾಳ ಮತ್ತು ಸಂಘಟನಾ ಚತುರರು ಉತ್ಪಾದನಾ ಪ್ರಕ್ರಿಯೆಗೆ ಸಲ್ಲಿಸುವ ಕಾಣಿಕೆಗೆ ಪ್ರತಿಯಾಗಿ ಗೇಣಿ, ಕೂಲಿ, ಬಡ್ಡಿ ಮತ್ತು ಲಾಭದ ರೂಪದಲ್ಲಿ ಪಡೆಯುವ ಆದಾಯದ ಒಟ್ಟು ಮೊತ್ತವೆ ಉತ್ಪಾದನಾಂಗಗಳ ವೆಚ್ಚದ ರೂಪದ ರಾಷ್ಟ್ರೀಯ ವರಮಾನವಾಗಿದೆ. ಉತ್ಪಾದನಾಂಗಗಳ ವೆಚ್ಚದ ರೂಪದಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಲೆಕ್ಕಾಚಾರ ಮಾಡುವಾಗ ಉತ್ಪಾದನಾಂಗಗಳು ಸರ್ಕಾರಕ್ಕೆ ಸಲ್ಲಿಸುವ ಪರೋಕ್ಷ ತೆರಿಗೆಗಳ ಮೊತ್ತವನ್ನು ಕಳೆದು ಸರ್ಕಾರದಿಂದ ಪಡೆಯುವ ಸಹಾಯಧನದ ಮೊತ್ತವನ್ನು ಸೇರಿಸಲಾಗುತ್ತದೆ. ಆದ್ದರಿಂದ ಉತ್ಪಾದನಾಂಗಗಳ ವೆಚ್ಚದ ರೂಪದ ಒಟ್ಟು ರಾಷ್ಟ್ರೀಯ ಉತ್ಪನ್ನವನ್ನು ಈ ಕೆಳಗಿನ ಸೂತ್ರದ ಮೂಲಕ ತಿಳಿಸಬಹುದು

ಉತ್ಪಾದನಾಂಗಗಳ ವೆಚ್ಚದ ರೂಪದ ಒಟ್ಟು ರಾಷ್ಟ್ರೀಯ ಉತ್ಪನ್ನ = ಮಾರುಕಟ್ಟೆಯ ಬೆಲೆಗಳಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ – ಪರೋಕ್ಷ ತೆರಿಗೆಗಳು + ಸಹಾಯ ಧನ

GNP at Factor cost = GNP at Market Prices – Indirect Taxes + Subsidies

## 2. ಒಟ್ಟು ದೇಶಿಯ ಉತ್ಪನ್ನ (Gross Domestic Product)

ಒಟ್ಟು ದೇಶಿಯ ಉತ್ಪನ್ನವೆಂದರೆ ಒಂದು ವರ್ಷದ ಅವಧಿಯಲ್ಲಿ ದೇಶದ ಭೌಗೋಳಿಕ ಪ್ರದೇಶದ ಒಳಗಡೆ ಉತ್ಪಾದನೆಯಾದ ಎಲ್ಲಾ ಅಂತಿಮ ವಸ್ತುಗಳ ಮತ್ತು ಸೇವೆಗಳ ಮೌಲ್ಯದ ಒಟ್ಟು ಮೊತ್ತವಾಗಿದೆ. ಅಂದರೆ ಒಟ್ಟು ದೇಶಿಯ ಉತ್ಪನ್ನವನ್ನು ಲೆಕ್ಕಾಚಾರ ಮಾಡುವಾಗ ವಿದೇಶದಿಂದ ದೇಶಕ್ಕೆ ಬರುವ ನಿವ್ವಳ ವರಮಾನವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಒಟ್ಟು ದೇಶಿಯ ಉತ್ಪನ್ನವನ್ನು ಈ ಕೆಳಗಿನ ಸೂತ್ರದ ಮೂಲಕ ಪ್ರಸ್ತುತ ಪಡಿಸಬಹುದು.

Scanned with CamScanner

ಒಟ್ಟು ದೇಶಿಯ ಉತ್ಪನ್ನ = ಒಟ್ಟು ರಾಷ್ಟ್ರೀಯ ಉತ್ಪನ್ನ - ವಿದೇಶ...
ಬರುವ ನಿವ್ವಳ ವರಮಾನ

$$(GDP) = GNP - (x - m)$$

ಒಟ್ಟು ದೇಶಿಯ ಉತ್ಪನ್ನವನ್ನು ಎರಡು ರೀತಿಯಲ್ಲಿ ಪ್ರಸ್ತುತ ಪಡಿಸಲಾಗು... ಅವುಗಳೆಂದರೆ

a) ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶಿ ಉತ್ಪನ್ನ
**(G.D.P at Market prices)**

ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶಿಯ ಉತ್ಪನ್ನವೆಂದರೆ ಒಂದು ದೇಶದ ಭೌಗೋ... ಪ್ರದೇಶದ ಒಳಗಡೆ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾದ ಎಲ್ಲಾ ಅಂ... ಸರಕು ಮತ್ತು ಸೇವೆಗಳ ಮೌಲ್ಯವನ್ನು ಆ ವರ್ಷದಲ್ಲಿ ಜಾರಿಯಲ್ಲಿರುವ ಮಾರುಕಟ್ಟೆ ಬೆಲೆ... ಕಂಡುಹಿಡಿಯುವುದಾಗಿದೆ.

ಪ್ರೊ. ಡೆರ್ನಬರ್ಗ್ ಎಂಬ ಅರ್ಥಶಾಸ್ತ್ರಜ್ಞನ ಪ್ರಕಾರ "ಒಂದು ದೇಶದ ಭೌಗೋ... ಪ್ರದೇಶದಲ್ಲಿ ಲೆಕ್ಕಾಚಾರದ ವರ್ಷದಲ್ಲಿ ಉತ್ಪಾದನೆಯಾದ ಅಂತಿಮ ಸರಕು ಮತ್ತು ಸೇವೆ... ಒಟ್ಟು ಮಾರುಕಟ್ಟೆಯ ಮೌಲ್ಯವೆ ಒಟ್ಟು ದೇಶಿಯ ಉತ್ಪನ್ನವಾಗಿದೆ." ಆದ್ದರಿಂದ ಮಾರು... ಬೆಲೆಗಳಲ್ಲಿ ಒಟ್ಟು ದೇಶಿಯ ಉತ್ಪನ್ನದ ಸೂತ್ರವು ಈ ಕೆಳಗಿನಂತೆ ಬರೆಯಬಹುದು.

ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ದೇಶಿಯ ಉತ್ಪನ್ನ = ಒಟ್ಟು ರಾಷ್ಟ್ರೀಯ ಉತ್ಪನ್ನ ಮಾರುಕಟ್ಟೆ ಬೆಲೆಗಳಲ್ಲಿ – ವಿದೇಶದಿಂದ ಬರುವ ನಿವ್ವಳ ವರಮಾನ

G.D.P. Market Prices = GNP at Market Prices – (X – M)

b) ಉತ್ಪಾದನಾಂಗಗಳ ವೆಚ್ಚದ ರೂಪದ ಒಟ್ಟು ದೇಶಿಯ ಉತ್ಪನ್ನ
**(G.D.P. at Factor Cost)**

ಉತ್ಪಾದನಾಂಗಗಳ ವೆಚ್ಚದ ರೂಪದ ಒಟ್ಟು ದೇಶಿಯ ಉತ್ಪನ್ನವೆಂದರೆ ಒಂದು ದೇಶ... ಭೌಗೋಳದ ಪ್ರದೇಶದ ಒಳಗಡೆ ವಿವಿಧ ಉತ್ಪಾದನಾಂಗಗಳು ತಾವು ಉತ್ಪಾದನೆಗೆ ಸಲ್ಲಿಸ... ಕಾಣಿಕೆಗೆ ಪ್ರತಿಫಲವಾಗಿ ಪಡೆಯುವ ವರಮಾನದ ಒಟ್ಟು ಮೊತ್ತವಾಗಿದೆ. ಅಂದರೆ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನಾಚತುರರು ದೇಶದ ಒಳಗಡೆ ತಾವು ಸಲ್ಲಿಸಿದ ಸೇವೆ... ಪ್ರತಿಯಾಗಿ ಪಡೆಯುವ ವರಮಾನದ ಒಟ್ಟು ಮೊತ್ತವೆ ಉತ್ಪಾದನಾಂಗಗಳ ವೆಚ್ಚ ರೂಪದ ಒಟ್ಟು ದೇಶಿಯ ಉತ್ಪನ್ನವಾಗಿದೆ. ಸೂತ್ರದ ರೂಪದಲ್ಲಿ ಉತ್ಪಾದನಾಂಗಗಳ ವೆಚ್ಚ... ರೂಪದಲ್ಲಿ ಒಟ್ಟು ದೇಶಿಯ ಉತ್ಪನ್ನವನ್ನು ಈ ರೀತಿಯಾಗಿ ಬರೆಯಬಹುದು.

Scanned with CamScanner

ಒಟ್ಟು ದೇಶೀಯ ಉತ್ಪನ್ನ ಉತ್ಪಾದನಾಂಗಗಳ ವೆಚ್ಚರೂಪದಲ್ಲಿ = ಉತ್ಪಾದನಾಂಗಗಳು ಉತ್ಪಾದನೆಗೆ ಸಲ್ಲಿಸಿದ ನಿವ್ವಳ ಕಾಣಿಕೆ + ಸವಕಳಿ ವೆಚ್ಚಗಳು

GDP at Factor cost = Net value Added by Factors + Depreciations

## 3. ನಿವ್ವಳ ರಾಷ್ಟ್ರೀಯ ಉತ್ಪನ್ನ (Net National Product)

ನಿವ್ವಳ ರಾಷ್ಟ್ರೀಯ ಉತ್ಪನ್ನವೆಂದರೆ ಒಂದು ದೇಶದ ಅರ್ಥವ್ಯವಸ್ಥೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾದ ಎಲ್ಲಾ ಅಂತಿಮ ವಸ್ತುಗಳ ಮತ್ತು ಸೇವೆಗಳ ಒಟ್ಟು ಮೌಲ್ಯದಿಂದ ಸವಕಳಿ ವೆಚ್ಚವನ್ನು ಕಳೆದಾಗ ಸಿಗುವ ಮೊತ್ತವಾಗಿದೆ. ಅಂದರೆ ವಸ್ತುಗಳ ಮತ್ತು ಸೇವೆಗಳ ಉತ್ಪಾದನಾ ಪ್ರಕ್ರಿಯೆಯಲ್ಲಿ ಯಂತ್ರಗಳು, ಸ್ಥಾವರಗಳು ಮತ್ತು ಇತರೆ ಬಂಡವಾಳ ಸರಕುಗಳು ಸವೆದು ಹೋಗುವುದಾಗಲಿ ಅಥವಾ ದುರಸ್ತಿ ಮಾಡುವುದಾಗಲಿ ಮಾಡಬೇಕಾಗುತ್ತದೆ. ಇವುಗಳನ್ನು ಸುಸ್ಥಿತಿಯಲ್ಲಿಡಲು ಉತ್ಪಾದಕರು ಸ್ವಲ್ಪ ಮೊತ್ತವನ್ನು ವೆಚ್ಚ ಮಾಡಬೇಕಾಗುತ್ತದೆ ಇದನ್ನು ಸವಕಳಿ ವೆಚ್ಚ ಅಥವಾ ಬಂಡವಾಳದ ಅನುಭೋಗ ಎಂದು ಕರೆಯುತ್ತಾರೆ. ಅರ್ಥವ್ಯವಸ್ಥೆಯಲ್ಲಿ ಉತ್ಪಾದಕರೆಲ್ಲರು ಈ ರೀತಿ ಮಾಡಿದ ವೆಚ್ಚವನ್ನು ಉತ್ಪಾದಿಸಿದ ವಸ್ತುಗಳ ಮತ್ತು ಸೇವೆಗಳ ಮೌಲ್ಯದಿಂದ ಕಳೆದಾಗ ನಿವ್ವಳ ರಾಷ್ಟ್ರೀಯ ಉತ್ಪನ್ನವು ದೊರೆಯುತ್ತದೆ. ಉಳಿದೆಲ್ಲ ರಾಷ್ಟ್ರೀಯ ವರಮಾನದ ಪರಿಕಲ್ಪನೆಗಳಿಗೆ ಹೋಲಿಕೆ ಮಾಡಿದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವು ಹೆಚ್ಚು ವಾಸ್ತವಿಕವು ಮತ್ತು ಅರ್ಥವ್ಯವಸ್ಥೆಯ ಆದಾಯದ ನೈಜ ಚಿತ್ರಣವನ್ನು ಕೊಡುವ ಪರಿಕಲ್ಪನೆಯಾಗಿದೆಯೆಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಆದರೆ ಸವಕಳಿ ವೆಚ್ಚದ ಲೆಕ್ಕಾಚಾರವು ಸಂಕೀರ್ಣವಾಗಿರುವುದರಿಂದ ನಿಖರ ಸವಕಳಿ ವೆಚ್ಚವನ್ನು ಅಳೆಯುವುದು ಕಷ್ಟದಾಯಕವಾದುದು. ಆದ್ದರಿಂದ ನಿವ್ವಳ ರಾಷ್ಟ್ರೀಯ ಉತ್ಪನ್ನ ಪರಿಭಾವನೆಯು ಅಷ್ಟೊಂದು ಪ್ರಾಯೋಗಿಕ ಪ್ರಾಮುಖ್ಯತೆಯನ್ನು ಹೊಂದಿರುವುದಿಲ್ಲ. ನಿವ್ವಳ ರಾಷ್ಟ್ರೀಯ ಉತ್ಪನ್ನವನ್ನು ಕಂಡುಹಿಡಿಯುವ ಸೂತ್ರವು ಈ ಕೆಳಗಿನಂತಿದೆ.

ನಿವ್ವಳ ರಾಷ್ಟ್ರೀಯ ಉತ್ಪನ್ನ = ಒಟ್ಟು ರಾಷ್ಟ್ರೀಯ ಉತ್ಪನ್ನ – ಸವಕಳಿ ವೆಚ್ಚ

NNP = GNP – Depriciation

ನಿವ್ವಳ ರಾಷ್ಟ್ರೀಯ ಉತ್ಪನ್ನವನ್ನು ಎರಡು ರೀತಿಯಲ್ಲಿ ಅಳೆಯಲಾಗುತ್ತದೆ. ಅವುಗಳೆಂದರೆ

### a) ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನ (NNP at Market Prices)

ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವೆಂದರೆ ಪ್ರಸ್ತುತದಲ್ಲಿ ಮಾರುಕಟ್ಟೆಯಲ್ಲಿ ಪ್ರಚಲಿತವಿರುವ ಬೆಲೆಗಳಲ್ಲಿ ಸರಕು ಮತ್ತು ಸೇವೆಗಳ ಮೌಲ್ಯವನ್ನು ಅಂದಾಜು ಮಾಡಿ ಅದರಿಂದ ಸವಕಳಿ ವೆಚ್ಚವನ್ನು ಕಳೆಯುವುದಾಗಿದೆ. ಆದ್ದರಿಂದ

Scanned with CamScanner

ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ = ಮಾರುಕಟ್ಟೆ ಬೆಲೆಗಳಲ್ಲಿ ಒಟ್ಟು ರಾ
ರಾಷ್ಟ್ರೀಯ ಉತ್ಪನ್ನ ಉತ್ಪನ್ನ – ಸವಕಳಿ ವೆಚ್ಚಗಳು

NNP at Market Prices = GDP at market prices – Depreciation

## b) ಉತ್ಪಾದನಾಂಗಗಳ ವೆಚ್ಚದ ರೂಪದ ನಿವ್ವಳ ರಾಷ್ಟ್ರೀಯ ಉತ್ಪನ್ನ (NNP at Factor cost)

ಉತ್ಪಾದನಾಂಗಗಳ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವೆಂದರೆ ಅರ್ಥ ವ್ಯವ ಎಲ್ಲಾ ಉತ್ಪಾದನಾಂಗಗಳು ಪಡೆಯುವ ಪ್ರತಿಫಲದ ಒಟ್ಟು ಮೊತ್ತವಾಗಿದೆ. ಉತ್ಪಾದನಾಂಗಗಳಾದ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳು ಗೇಣಿ, ಬಡ್ಡಿ ಮತ್ತು ಲಾಭ ರೂಪದಲ್ಲಿ ಪಡೆಯುವ ಪ್ರತಿಫಲಗಳ ಒಟ್ಟು ಮೊತ್ತವಾಗಿದೆ. ಉತ್ಪಾದನಾಂಗಗಳ ವೆಚ್ಚದ ರೂಪದಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನವನ್ನು ಲೆಕ್ಕ ಮಾಡುವಾಗ ಸವಕಳಿ ವೆಚ್ಚವನ್ನು ಕಳೆಯಲು ಬರುವುದಿಲ್ಲ ಆದ್ದರಿಂದ ಉತ್ಪಾದನಾ ಸರ್ಕಾರಕ್ಕೆ ಸಲ್ಲಿಸಿದ ಪರೋಕ್ಷ ತೆರಿಗೆಗಳನ್ನು ಕಳೆದು ಸರ್ಕಾರದದಿಂದ ಪಡೆದ ಸಹಾಯಧನ ಕೂಡಿಸಲಾಗುತ್ತದೆ. ಹೀಗಾಗಿ ಉತ್ಪಾದನಾಂಗಗಳ ವೆಚ್ಚದ ರೂಪದ ನಿವ್ವಳ ರಾಷ್ಟ್ರೀಯ ಉ ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ ಉತ್ಪನ್ನದಿಂದ ಪರೋಕ್ಷ ತೆರಿಗೆಗಳನ್ನು ಸಹಾಯಧನವನ್ನು ಕೂಡಿಸುವುದರಿಂದ ಸಿಗುವ ಮೊತ್ತವಾಗಿದೆ. ಸೂತ್ರದ ರೂಪದಲ್ಲಿ ಈ ರೀತಿ ಪ್ರಸ್ತುತ ಪಡಿಸಬಹುದು.

ಉತ್ಪಾದನಾಂಗಗಳ ವೆಚ್ಚದ ನಿವ್ವಳ = ಮಾರುಕಟ್ಟೆ ಬೆಲೆಗಳಲ್ಲಿ ನಿವ್ವಳ ರಾಷ್ಟ್ರೀಯ
ರಾಷ್ಟ್ರೀಯ ಉತ್ಪನ್ನ ಉತ್ಪನ್ನ – ಪರೋಕ್ಷ ತೆರಿಗೆಗಳು + ಸಹಾಯ

NNP at Factor cost = NNP at Market Prices – Indirect Taxes + Subsidies

## 4. ರಾಷ್ಟ್ರೀಯ ವರಮಾನ (National Income)

ರಾಷ್ಟ್ರೀಯ ವರಮಾನವೆಂದರೆ ಒಂದು ಅರ್ಥವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾಂಗ ಉತ್ಪಾದನೆಗೆ ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಪಡೆಯುವ ಪ್ರತಿಫಲದ ಒಟ್ಟು ಮೊತ್ತವಾ ಅಂದರೆ ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆಗಳು ಗೇಣಿ, ಕೂಲಿ, ಬಡ್ಡಿ ಮ ಲಾಭದ ರೂಪದಲ್ಲಿ ಪಡೆಯುವ ಪ್ರತಿಫಲದ ಒಟ್ಟು ಮೊತ್ತವೆ ರಾಷ್ಟ್ರೀಯ ವರಮಾನವಾ ರಾಷ್ಟ್ರೀಯ ವರಮಾನವನ್ನು ಲೆಕ್ಕಾಚಾರ ಮಾಡುವಾಗ ಉತ್ಪಾದನಾಂಗಗಳು ಸರ್ಕಾ ಪಾವತಿಸಿದ ಪರೋಕ್ಷ ತೆರಿಗೆಗಳನ್ನು ಅವುಗಳ ಪಡೆಯುವ ವರಮಾನದಿಂ ಕಳೆಯಲಾಗುತ್ತದೆ. ಅದೇ ಸಂದರ್ಭದಲ್ಲಿ ಉತ್ಪಾದನಾಂಗಗಳು ಸರ್ಕಾರದಿಂದ ಸಹಾಯಧ

Scanned with CamScanner

ರೂಪದಲ್ಲಿ ಪಡೆಯುವ ವರಮಾನವನ್ನು ಸೇರಿಸಲಾಗುತ್ತದೆ. ಆದ್ದರಿಂದ ರಾಷ್ಟ್ರೀಯ ವರಮಾನವನ್ನು ಈ ಕೆಳಗಿನ ಸೂತ್ರದ ಮೂಲಕ ಪ್ರಸ್ತುತಪಡಿಸಬಹುದು.

ರಾಷ್ಟ್ರೀಯ ವರಮಾನ = ಉತ್ಪಾದನಾಂಗಗಳ ವೆಚ್ಚದ ನಿವ್ವಳ ರಾಷ್ಟ್ರೀಯ ಉತ್ಪನ್ನ – ಪರೋಕ್ಷ ತೆರಿಗೆಗಳು + ಸಹಾಯ ಧನ

National Income = NNP at Factor cost – Indirect Taxes + Subsidies

ರಾಷ್ಟ್ರೀಯ ವರಮಾನವನ್ನು ಎರಡು ರೀತಿಯಲ್ಲಿ ಪ್ರಸ್ತುತಪಡಿಸಲಾಗುತ್ತದೆ. ಅವುಗಳೆಂದರೆ

1. ನಾಮ ಮಾತ್ರ ರಾಷ್ಟ್ರೀಯ ವರಮಾನ **(Nominal National Income)**

ನಾಮ ಮಾತ್ರ ರಾಷ್ಟ್ರೀಯ ವರಮಾನವೆಂದರೆ ಪ್ರಸ್ತುತ ಮಾರುಕಟ್ಟೆಯ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನವನ್ನು ಅಂದಾಜು ಮಾಡುವುದಾಗಿದೆ. ನಾಮಮಾತ್ರ ರಾಷ್ಟ್ರೀಯ ವರಮಾನವು ಪ್ರಸ್ತುತ ಬೆಲೆಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಅದು ಅರ್ಥವ್ಯವಸ್ಥೆಯ ವಾಸ್ತವಿಕ ಚಿತ್ರಣವನ್ನು ಕೊಡುವುದಿಲ್ಲ. ಉದಾಹರಣೆಗೆ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆ ಹೆಚ್ಚಾಗದೆ ಕೇವಲ ಬೆಲೆಗಳು ಮಾತ್ರ ಹೆಚ್ಚಾದರೆ ರಾಷ್ಟ್ರೀಯ ವರಮಾನವು ಹೆಚ್ಚಳವಾಗುತ್ತದೆ ಆದರೆ ನಿಜವಾಗಿ ಅರ್ಥವ್ಯವಸ್ಥೆಯ ಉತ್ಪಾದನಾ ಮಟ್ಟದಲ್ಲಿ ಯಾವುದೇ ಏರಿಕೆಯಾಗಿರುವುದಿಲ್ಲ. ಆದ್ದರಿಂದ ಒಂದು ದೇಶದ ಅರ್ಥವ್ಯವಸ್ಥೆಯ ವಾಸ್ತವಿಕ ಚಿತ್ರಣವನ್ನು ಪಡೆಯುವುದಕ್ಕಾಗಿ ಅರ್ಥ ಶಾಸ್ತ್ರಜ್ಞರು ನೈಜ ರಾಷ್ಟ್ರೀಯ ವರಮಾನದ ಪರಿಕಲ್ಪನೆಯನ್ನು ಅಭಿವೃದ್ಧಿ ಪಡಿಸಿದ್ದಾರೆ.

2. ನೈಜ ರಾಷ್ಟ್ರೀಯ ವರಮಾನ **(Real National Income)**

ನೈಜ ರಾಷ್ಟ್ರೀಯ ವರಮಾನವೆಂದರೆ ಒಂದು ಮೂಲ ವರ್ಷವನ್ನು (Base year) ಆಧಾರವಾಗಿಟ್ಟುಕೊಂಡು ಆ ವರ್ಷದ ಬೆಲೆಗಳಲ್ಲಿ ರಾಷ್ಟ್ರೀಯ ವರಮಾನವನ್ನು ಲೆಕ್ಕಾಚಾರ ಮಾಡುವುದಾಗಿದೆ. ಈ ಪರಿಭಾವನೆಯು ಹೆಚ್ಚು ವಾಸ್ತವಿಕವೂ ಮತ್ತು ಅರ್ಥವ್ಯವಸ್ಥೆಯ ನೈಜ ಚಿತ್ರಣವನ್ನು ಕೊಡುವುದರಿಂದ ಅರ್ಥಶಾಸ್ತ್ರಜ್ಞರ ಮೆಚ್ಚುಗೆಯನ್ನು ಗಳಿಸಿದೆ. ಆದರೆ ಈ ವಿಧಾನದ ಮೂಲಕ ರಾಷ್ಟ್ರೀಯ ವರಮಾನವನ್ನು ಲೆಕ್ಕಾಚಾರ ಮಾಡುವುದು ಕಠಿಣವಾದುದಾಗಿದೆ.

## 5. ತಲಾವರಮಾನ (Per Capita Income)

ರಾಷ್ಟ್ರೀಯ ವರಮಾನದ ಅಧ್ಯಯನದ ಸಂದರ್ಭದಲ್ಲಿ ಬಳಸುವ ಇನ್ನೊಂದು ಪ್ರಮುಖ ಪರಿಭಾವನೆಯೆ ತಲಾವರಮಾನವಾಗಿದೆ. ತಲಾವರಮಾನವನ್ನು 'ತಲಾಆದಾಯ' ಎಂದೂ ಕರೆಯುತ್ತಾರೆ. ತಲಾ ಆದಾಯವೆಂದರೆ ಒಂದು ವರ್ಷದ ಅವಧಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಲಭ್ಯವಾಗುವ ಆದಾಯದ ಪ್ರಮಾಣವಾಗಿದೆ. ಅಂದರೆ ರಾಷ್ಟ್ರದ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯವೆ ತಲಾವರಮಾನವಾಗಿರುತ್ತದೆ. ರಾಷ್ಟ್ರೀಯ ವರಮಾನವು ರಾಷ್ಟ್ರದ ಒಟ್ಟು

Scanned with CamScanner